ಅ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಆರಾಧನಾ ಯೋಜನೆಯಡಿಯಲ್ಲಿ ಆಯವ್ಯಯದಲ್ಲಿ ಪ್ರತಿ ವರ್ಷ ನಿಗಧಿ ಪಡಿಸುವ ಹಣವನ್ನು ವಿಧಾನ ಸಭಾ ಕ್ಷೇತ್ರವಾರು ಸಮನಾಗಿ ಹಂಚಿಕೆ ಮಾಡಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಇದನ್ನು ಸಂಬಂಧಪಟ್ಟ ದೇವಸ್ಥಾನಗಳ ಬೇಡಿಕೆ ಮತ್ತು ಹಣದ ಲಭ್ಯತೆ ಗನುಗುಣವಾಗಿ ಆರಾಧನಾ ಸಮಿತಿಗಳ ಶಿಫಾರಸ್ಸಿನೊಂದಿಗೆ ಬಿಡುಗಡೆ ಮಾಡಲಾಗುತ್ತದೆ.

ಆ) ಉದ್ಭವಿಸುವುದಿಲ್ಲ.

ಮ್ಯಾಕ್ಸಿಕ್ಯಾಬ್‌ಗಳಿಗೆ ಪರವಾನಗಿ

738 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮ್ಯಾಕ್ಸಿಕ್ಯಾಬ್‌ಗಳು ಹಾಗೂ ಇತರೇ ಖಾಸಗೀ ವಾಹನಗಳಿಗೆ ಪರವಾನಗಿ ನೀಡುವಾಗ ಯಾವ ನಿಯಮಗಳನ್ನು ಅನುಸರಿಸಲಾಗುತ್ತಿದೆ (ವಿವರ ನೀಡುವುದು)

ಆ) ಇತ್ತೀಚೆಗೆ ಇವುಗಳಿಂದ ಅಪಘಾತ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ವಾಹನಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರು ಅಪಘಾತಕ್ಕೆ ಈಡಾಗಿ ನಿಧನ ಹೊಂದಿದರೆ ಅಥವಾ ಅಂಗವಿಕಲರಾದರೆ ಅವರಿಗೆ ಸರ್ಕಾರ ಪರಿಹಾರ ನೀಡುವ ಯೋಜನೆ ಇದೆಯೇ (ವಿಮೆ ಮಾಡಿದಂತಹ ವಾಹನಗಳಿಗೆ ಸಂಬಂಧಿಸಿದಂತೆ)?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಮ್ಯಾಕ್ಸಿಕ್ಯಾಬ್ ವಾಹನಗಳ ಪರವಾನಗಿಯನ್ನು ಮಂಜೂರು ಮಾಡುವಾಗ 1989ನೇ ಕರ್ನಾಟಕ ಮೋಟಾರು ವಾಹನದ ನಿಯಮ 58ನ್ನು ಹಾಗೂ ಇತರೆ ಖಾಸಗೀ ವಾಹನಗಳಿಗೆ ನಿಯಮ-62 (ಮಜಲು ವಾಹನ) ಮತ್ತು 1989 ಕೇಂದ್ರ ಮೋಟಾರು ವಾಹನ ನಿಯಮ-82 ರಿಂದ 85 (ಎ) (ಪ್ರವಾಸೀ ವಾಹನ) ರವರೆಗೆ ಅನುಸರಿಸಲಾಗುತ್ತಿದೆ.

ಆ) ಹೌದು.

ಇ) ಇರುವುದಿಲ್ಲ. ಆದರೆ ವಾಹನಗಳಿಗೆ ಲಭ್ಯವಿರುವ ವಿಮಾ ಪಾಲಿಸಿ ಹೊಂದಿರುವ ವಾಹನಗಳಿಂದ ಪರಿಹಾರವನ್ನು ಪಡೆಯಬಹುದಾಗಿರುತ್ತದೆ.